

ಹಸುರು ತುಂಬಿ ಕಂಗೊಳಿಸುವ
'ಎಲಿಫೆಂಟ್ ಹೆಡ್ ವ್ಯೂ ಪಾಯಿಂಟ್'

ಅತ್ಯುತ್ತಮ ತಾಣ. ಇಲ್ಲಿ ನೂರಾರು ಹೋಟೆಲ್‌ಗಳಿವೆ. ನಾವು ಮೊದಲೇ ಬುಕ್ ಮಾಡಿದ್ದರಿಂದ ಹೋಟೆಲ್ ಹುಡುಕುವುದರಲ್ಲಿ ಸಮಯ ವ್ಯರ್ಥ ಮಾಡಲಿಲ್ಲ. ಇಲ್ಲಿ ನೋಡಲು ಹಲವು ಜಾಗಗಳಿವೆ. ಅವುಗಳಲ್ಲಿ ಮಹಾಬಲೇಶ್ವರ ದೇವಾಲಯ, ಎಲಿಫೆಂಟ್ಸ್ ಹೆಡ್ ಪಾಯಿಂಟ್, ಲಾಡ್ವಿಕ್ ಪಾಯಿಂಟ್, ಪಂಚಗಂಗಾ ಟೆಂಪಲ್, ಲಿಂಗಮಾಲ ವಾಟರ್ ಫಾಲ್, ಕೃಷ್ಣಬಾಯಿ ಟೆಂಪಲ್, ಪ್ರತಾಪಘಡ, ಹೆಲೆನ್ಸ್ ಪಾಯಿಂಟ್ ಹಾಗೂ ಪಂಚಗಣಿಯ ಟೇಬಲ್ ಲ್ಯಾಂಡ್, ಮ್ಯಾಪ್ರೋ ಗಾರ್ಡನ್ ಇತ್ಯಾದಿ ನೋಡಲೇಬೇಕಾದ ಸ್ಥಳಗಳು.

ಗಿರಿಧಾಮದಂಥ ಪ್ರೇಕ್ಷಣೀಯ ಸ್ಥಳಗಳಿಗೆ ಹೋದರೆ ಅಲ್ಲಿಯ ಸೂರ್ಯೋದಯ ಮತ್ತು ಸೂರ್ಯಾಸ್ತದ ಚೆಲುವನ್ನು ಸವಿಯಲೇಬೇಕು. ಈ ಸಮಯದಲ್ಲಿ ಓಡಾಡಿದರೆ ಹೆಚ್ಚಿಗೆ ದಣಿವಾಗುವುದಿಲ್ಲ. ಫೋಟೊ ಪ್ರೇಮಿಗಳಾದರಂತೂ ಈ ಸಮಯದಲ್ಲಿ ಉತ್ತಮ ಫೋಟೊ ಸಿಗುವುದು ಗ್ಯಾರಂಟಿ.

ಮರುದಿನ ಬೆಳಿಗ್ಗೆ ಬೇಗನೆ ಎದ್ದವರೇ ನಾವು ಮೊದಲು ಹೋಗಿದ್ದು ಲಾಡ್ವಿಕ್ ಪಾಯಿಂಟ್‌ಗೆ. ಇದೊಂದು ಅದ್ಭುತ, ರಮಣೀಯ ಜಾಗ. ಈ ಜಾಗದಿಂದ 360 ಡಿಗ್ರಿಯಲ್ಲಿ ನಿಸರ್ಗದ ವಿಸ್ಮಯಗಳನ್ನು ಮನಸಾರೆ ಕಂಡು ತಣಿಯಬಹುದು. ಗಿರಿಕಂದರವನ್ನೆಲ್ಲ ತನ್ನ ತೆಕ್ಕೆಗೆ ಸೆಳೆದುಕೊಂಡಿದ್ದ ಮಂಜಿನ ಚಾದರದ ಮೇಲೆ ಸೂರ್ಯನ ರಶ್ಮಿಗಳು ಬಿದ್ದು ನಮ್ಮನ್ನೂ ಮಂಜಿನ ಮೇಲೆ ತೇಲಿಸಿದಂಥ ಅನುಭವ. ಪ್ರಕೃತಿಯಲ್ಲಿ ನಮ್ಮನ್ನೂ ಒಂದಾಗಿಸುವ ಬೆರಗಿನ ಆ ಪರಿ ಅನುಭವಕ್ಕಷ್ಟೇ ದಕ್ಕುವಂಥದ್ದು.

ಅಲ್ಲಿಂದ ನಮ್ಮ ಮುಂದಿನ ಪಯಣ ಹೊರಟಿದ್ದು ಮಹಾಬಲೇಶ್ವರ ದೇವಸ್ಥಾನದ ಕಡೆಗೆ. ಪ್ರಕೃತಿಯ ಈ ತಾಣಕ್ಕೆ ಆಧ್ಯಾತ್ಮಿಕ ಸ್ಪರ್ಶವೂ ಸಿಕ್ಕಿದೆ. ಈ ದೇವಸ್ಥಾನ ತುಂಬಾ ದೊಡ್ಡದಲ್ಲದಿದ್ದರೂ ಮನಸ್ಸಿಗೆ ನಾಟುವ ಶಿಲ್ಪಕಲೆಯಿಂದ ಕೂಡಿದೆ. ಇದು ಹೇಮದಂತ ಶಿಲ್ಪಕಲೆ ಶೈಲಿಯಲ್ಲಿದೆ. ಹೆಸರೇ ಹೇಳುವಂತೆ ಇದು ಶಿವನ ದೇಗುಲ. ಸುಮಾರು 16ನೇ ಶತಮಾನದಲ್ಲಿ ಮೌರ್ಯ ರಾಜ ಚಂದರಾವ್ ಕಟ್ಟಿಸಿದ್ದು. ದೇಗುಲದಲ್ಲಿ ಮಾನವ ನಿರ್ಮಿತ ಶಿವಲಿಂಗವಿಲ್ಲ ಎನ್ನುವುದೇ ಈ ಶಿವಾಲಯದ ವೈಶಿಷ್ಟ್ಯ. ಇಲ್ಲಿರುವುದು ಸುಮಾರು 500 ವರ್ಷ ಹಳೆಯದಾದ, ಸುಮಾರು ಆರು ಅಡಿ ಉದ್ದದ ರುದ್ರಾಕ್ಷಿಯ ಗೊಂಚಲಿನ ಆಕಾರದಲ್ಲಿರುವ, ಭೂಮಿಯಿಂದಲೇ ಹುಟ್ಟಿ ಬಂದ ಲಿಂಗ. ಸಂಸ್ಕೃತದಲ್ಲಿ ಇದಕ್ಕೆ 'ಸ್ವಯಂಭೂ' ಅನ್ನುತ್ತಾರೆ. ಈ ದೇವಾಲಯದ ಆಜುಬಾಜಿನಲ್ಲೇ ಅತ್ತಿಬಲೇಶ್ವರ ದೇವಾಲಯ ಮತ್ತು ಪಂಚಗಂಗಾ ದೇವಾಲಯವಿದೆ. ಪಂಚಗಂಗಾ ದೇವಾಲಯ ಐದು ನದಿಗಳ (ಕೊಯ್ನಾ, ಸಾವಿತ್ರಿ, ಗಾಯತ್ರಿ, ವೀಣಾ ಮತ್ತು ಕೃಷ್ಣ) ಉಗಮ ಸ್ಥಾನವೆಂದು ಹೇಳುತ್ತಾರೆ.



ಮರಾಠರು ವಿಜಯ ಪತಾಕೆ ಹಾರಿಸಿದ
ಕುರುಹು 'ಪ್ರತಾಪಘಡ'

ಆಗಲೇ ಮಧ್ಯಾಹ್ನವಾಗಿತ್ತು. ಮಹಾಬಲೇಶ್ವರದಲ್ಲಿ ಸುಡುಬಿಸಿಲು ಜೋರಾಗಿಯೇ ಇರುತ್ತದೆ. ಇಳಿ ಮಧ್ಯಾಹ್ನ ಮೂರರ ಸುಮಾರಿಗೆ ನಾವು ನೋಡಲು ಹೊರಟಿದ್ದು ಲಿಂಗಮಾಲಾ ವಾಟರ್ ಫಾಲ್ಸ್.

ಮಹಾಬಲೇಶ್ವರದ ವಿಶೇಷವೆಂದರೆ, ಒಂದು ತಾಣದಿಂದ ಇನ್ನೊಂದು ತಾಣಕ್ಕೆ ಹೋಗಲು ಬರೇ 30 ನಿಮಿಷ ಸಾಕು. ಲಿಂಗಮಾಲಾ ಜಲಪಾತದ ಜಲವೈಭವವನ್ನು ಎರಡು ಬಗೆಯಲ್ಲಿ ಕಾಣಬಹುದು. ಮೊದಲು ಸಿಗುವುದು 'ಮಿನಿ ಫಾಲ್ಸ್'. ಅಗಲವಾಗಿ ಹರಡಿಕೊಂಡಿರುವ ಇದು, ಮಕ್ಕಳ ಜೊತೆ ಕುಣಿದು ಕುಪ್ಪಳಿಸಲು ಪ್ರಶಸ್ತ ಜಾಗ. ಇಲ್ಲಿಂದ ಸುಮಾರು 30 ನಿಮಿಷ ನಡೆದರೆ ಗುಡ್ಡಗಳ ಮಧ್ಯದಿಂದ, ಸುಮಾರು 500 ಮೀಟರ್ ಎತ್ತರದಿಂದ ಧುಮುಕುವ ಮುಖ್ಯ ಜಲಪಾತ ಕಾಣಲು ಸಿಗುತ್ತದೆ. ಸುಮಾರು ಅರ್ಧ ತಾಸು ಅಲ್ಲೇ ಕುಳಿತು, ಪ್ರಕೃತಿಯ ವೈಚಿತ್ರ್ಯವನ್ನು ಮನಸಾರೆ ಕಣ್ತುಂಬಿಕೊಂಡೆವು.

ಮಹಾಬಲೇಶ್ವರ ಮತ್ತು ಆಜುಬಾಜಿನಲ್ಲಿ ಸ್ಟ್ರಾಬೆರಿ ಬೆಳೆಯುತ್ತಾರೆ. ನಾವು ಹೋದ ಸಮಯ, ಸ್ಟ್ರಾಬೆರಿ ಸೀಸನ್ ಆಗಿರಲಿಲ್ಲ. ಹಾಗಾಗಿ, ತಾಜಾ ಹಣ್ಣುಗಳನ್ನು ಸವಿಯಲಾಗಲಿಲ್ಲ. ಆದರೂ